ಎಂ ವಿ ಸಿ ನಂ. 1881/2023

ಪಿ.ಡಬ್ಲು– 1

ದಿನಾಂಕಃ 06–10–2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ– ಎದುರುದಾರರ ನಂ.2 ಪರ ಶ್ರೀಮತಿ. ವಾಯ್ ವಿ ಡಿ ವಕೀಲರಿಂದ.**

ನಾನು ಆ ದಿವಸ ಮಿನಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ. ನನ್ನನ್ನು ಒಳಗೊಂಡು ಇನ್ನೂ 13–14 ಜನ ಪ್ರಯಾಣಿಕರು ನನ್ನೊಂದಿಗೆ ಪ್ರಯಾಣಿಸುತ್ತಿದ್ದರು. ಅಪಘಾತ ಯಾವ ದಿನಾಂಕದಂದು ಆಗಿರುತ್ತದೆ ಎಂದು ನೆನಪಿಲ್ಲ. ಎಷ್ಟು ವರ್ಷಗಳ ಹಿಂದೆ ಆಗಿರುತ್ತದೆ ಎಂದು ನೆನಪಿಲ್ಲ. ಅಪಘಾತವು ಬಿಸನಳ್ಳಿ ಗ್ರಾಮದ ರಸ್ತೆಯ ಮೇಲೆ ಆಗಿರುತ್ತದೆ. ಅಪಘಾತ ಯಾವ ಸಮಯದಂದು ಆಗಿರುತ್ತದೆ ಎಂದು ಗೊತ್ತಿಲ್ಲ. ಆ ದಿವಸ ನನ್ನೊಂದಿಗೆ ನನ್ನ ಗಂಡ ಸಹ ಪ್ರಯಾಣ ಮಾಡುತ್ತಿದ್ದರು. ನನ್ನ ಗಂಡನಿಗೆ ತಲೆಗೆ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದರು. ಆ ದಿವಸ ಮಿನಿ ಬಸ್ಸಿನಲ್ಲಿ ನಾವು 23–25 ಜನ ಪ್ರಯಾಣಿಸುತ್ತಿದ್ದೆವು ಎಂದರೆ ಸರಿಯಲ್ಲ. ನಾವು ಪ್ರಯಾಣಿಸುತ್ತಿದ್ದ ಬಸ್ಸಿನ ಪ್ರಯಾಣಿಕರ ಸಾಮರ್ಥ್ಯ 12 ಜನ ಮತ್ತು ಓರ್ವ ಡ್ರೈವರ್ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಆ ಬಸ್ಸಿನಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚು ಪ್ರಯಾಣಿಕರು ಪ್ರಯಾಣಿಸುತ್ತಿದ್ದರಿಂದ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾಹನದ ಚಾಲಕನಿಗೆ ವಾಹನ ಚಾಲನೆ ಪರವಾನಿಗೆ ಪತ್ರ ಇರಲಿಲ್ಲ, ವಾಹನಕ್ಕೆ ಪರ್ಮಿಟ್ ಮತ್ತು ಪಿಟ್‌ನೆಸ್ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ವಿಮೆಯ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘನೆ ಮಾಡಿದ್ದರಿಂದ 2 ನೇ ಎದುರುದಾರರು ನನಗೆ ಪರಿಹಾರ ನೀಡುವ ಹೊಣೆಗಾರಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

2. ನನಗೆ ಇಬ್ಬರು ಜನ ಮಕ್ಕಳು ಅವರ ವಯಸ್ಸು ಮಗಳಿಗೆ 5 ವರ್ಷ, ಮಗನಿಗೆ 3 ವರ್ಷ ಇರುತ್ತದೆ. ಅರ್ಜಿದಾರ ನಂ.4 ಮತ್ತು 5 ಇವರು ನನ್ನ ಅತ್ತೆ ಮಾವ ಇರುತ್ತಾರೆ. ಅರ್ಜಿದಾರ ನಂ.4 ಮತ್ತು 5 ಇವರು ನನ್ನ ಗಂಡನಿಗೆ ವಾರಸುದಾರರು ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ಹಾಗೇ ನಾನು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅವರು ನನ್ನ ಗಂಡನೊಂದಿಗೆ ಎಂದೂ, ಯಾವ ಕಾಲಕ್ಕೂ ವಾಸ ಮಾಡುತ್ತಿರಲಿಲ್ಲ ಮತ್ತು ಅವರು ನನ್ನ ಗಂಡನ ಅವಲಂಬಿತರು ಅಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರ ನಂ.4 ಮತ್ತು 5 ಇವರನ್ನು ಮುದ್ದಾಮ ಅವಶ್ಯಕ ಪಕ್ಷಗಾರರಲ್ಲದಿದ್ದರೂ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಎಂ ವಿ ಸಿ ನಂ. 1881/2023

ಪಿ.ಡಬ್ಲು- 1

3. ನನ್ನ ಗಂಡನಿಗೆ ಅಪಘಾತವಾದಾಗ 40 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಅವರು ಜೆ ಎಸ್ ಡಬ್ಲು ಇಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದರು. ಅವರು ಐಟಿಐ ಪದವಿ ಹೊಂದಿದ್ದರು. ಅವರು ಕೆಲಸಕ್ಕೆ ಸೇರ್ಪಡೆಯಾಗುವ ಕುರಿತು ಸದರಿ ಕಂಪನಿಯಿಂದ ನೀಡಲಾದ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ಅವರು ಪ್ರತಿ ತಿಂಗಳು ರೂ.50 ಸಾವಿರ ಸಂಬಳ ಪಡೆಯುತ್ತಿದ್ದರು ಎಂದು ತೋರಿಸಲು ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ಹಾಗೇ ಅವರು ರೂ.50 ಸಾವಿರ ಸಂಬಳ ಪಡೆಯುತ್ತಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಯಾವುದೇ ಕಾಗದ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆ ದಿವಸ ನನ್ನ ಮಗನ ಜವಳದ ಕಾರ್ಯಕ್ರಮಕ್ಕೆ ವಾಹನದಲ್ಲಿ ಹೊರಟಿದ್ದು ಇತ್ತು. ಹಾಗೇ ಹೊರಟವರಲ್ಲಿ ನನ್ನ ಸಂಬಂಧಿಕರು ಸಹ ಇದ್ದರು. ಅವರು ಮೃತರಾಗುವ 2 ದಿನ ಮುಂಚಿನ ದಿನದವರೆಗೆ ಕೆಲಸ ಮಾಡಿದ್ದರು. ಅವರು 4 ದಿನ ರಜೆ ಪಡೆದುಕೊಂಡಿದ್ದರು. ಹಾಗೇ ರಜೆ ಪಡೆದುಕೊಂಡ ಬಗ್ಗೆ ಕಾಗದ ಪತ್ರ ಹಾಜರುಪಡಿಸಿರುತ್ತೇನೆ. ಹಾಗೇ ನಾನು ಯಾವುದೇ ಕಾಗದ ಪತ್ರ ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ನಮ್ಮ ಜೀವನ ಚೆನ್ನಾಗಿ ಸಾಗುತ್ತಿರುತ್ತದೆ ಎಂದರೆ ಸರಿಯಲ್ಲ. ನನಗೆ ಪರಿಹಾರವನ್ನು 1 ನೇ ಎದುರುದಾರರೇ ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.